ಅಸಲು ದಾವೆ ಸಂಖ್ಯೆ - 312/2018
ಡಿ.ಡಬ್ಲ್ಯೂ - 02
ದಿನಾಂಕಃ 27-06-2025
ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.

**ಪಾಟೀ ಸವಾಲುಃ ವಾದಿ ಪರ ಶ್ರೀ.ಎಮ್ ಎಮ್ ಪಿ ವಕೀಲರಿಂದ**

ದಾವೆಯನ್ನು ಯಾರು ಯಾರ ಮೇಲೆ ಹೂಡಿದ್ದಾರೆ ಎಂದರೆ ರಮೇಶ ಅವರ ಮೇಲೆ ದ್ರಾಕ್ಷಿಯಣಿ ರವರು ಹೂಡಿದ್ದಾರೆ. ವಾದಿ ಯಾರ ಮಗಳು ಎಂದರೆ ಚನ್ನಪ್ಪನ ಮಗಳು. ನಾನು ಎಸ್ ಎಸ್ ಎಲ್ ಸಿ ವರಗೆ ವಿಧ್ಯಾಭ್ಯಾಸ ಮಾಡಿದ್ದೇನೆ. ಪ್ರತಿವಾದಿಯ ಜನಕ ತಂದೆ ಯಾರು ಎಂದರೆ ಚನ್ನಪ್ಪ. ವಾದಿಯು ಶಾಲೆಯನ್ನು ಎಲ್ಲಿ ಕಲಿತಿದ್ದಾರೆ ಎಂದರೆ ತವರಮೆಳ್ಳಿಹಳ್ಳಿಯಲ್ಲಿ ಕಲಿತಿದ್ದಾರೆ. ಅವರು ಯಾರ ಮನೆಯಲ್ಲಿ ಇದ್ದು ಕಲಿತಿದ್ದಾರೆ ಎಂದರೆ ಚನ್ನಬಸಪ್ಪ ರವರ ಮನೆಯಲ್ಲಿ ಇದ್ದು ಅವರು ಕರೆದುಕೊಂಡು ಬಂದು ಶಾಲೆ ಕಲಿಸಿರುತ್ತಾರೆ. ಆಗ ನಾಗವ್ವ ಚನ್ನಬಸಪ್ಪನ ಮನೆಯಲ್ಲಿ ಇದ್ದರು ಎಂದರೆ ಸರಿ. ಮುಂದುವರೆದು ಚನ್ನಬಸ್ಸಪ್ಪರವರು ಮೂರು ಜನರನ್ನು ಕರೆದುಕೊಂಡು ವಿಧ್ಯಾಭ್ಯಾಸ ಕಲಿಸಿರುತ್ತಾರೆ. ಆ ವೇಳೆಯಲ್ಲಿ ಪ್ರತಿವಾದಿಯ ತಂದೆಯ ಹೆಸರು ಚನ್ನಪ್ಪ ಅಂತಲೇ ಇತ್ತು ಎಂದರೆ ಸರಿ. ಶಾಲೆಗೆ ಸೇರಿಸಲು ಕರೆದುಕೊಂಡು ಬಂದಾಗ ವಾದಿಯ ತಂದೆಯ ಹೆಸರು ಚನ್ನಬಸಪ್ಪ ಅಂತಾ ಮತ್ತು ಪ್ರತಿವಾದಿಯ ತಂದೆಯ ಹೆಸರು ಚನ್ನಪ್ಪ ಅಂತಾ ಇತ್ತು ಎಂದರೆ ಸುಳ್ಳು ಇರುತ್ತದೆ.

ವಾದಿಯು ಚನ್ನಬಸಪ್ಪನ ಮಗಳಿದ್ದರು ಸಹ ಇಲ್ಲ ಎಂದು ಸುಳ್ಳು ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ವಾದಿಯು ಎಷ್ಟು ವರ್ಷವಾಗಿದ್ದಾಗ ತವರಮೆಳ್ಳಿಹಳ್ಳಿ ಗ್ರಾಮಕ್ಕೆ ಕರೆದುಕೊಂಡು ಬಂದಿರುತ್ತಾರೆ ಎಂದರೆ 2 ವರ್ಷ ಇದ್ದಾಗಲೇ ಕರೆದುಕೊಂಡು ಬಂದಿರುತ್ತಾರೆ. 2 ವರ್ಷದ ಮೊದಲು ಅವರು ಎಲ್ಲಿ ಇದ್ದರು ಎಂದರೆ ಹಾನಗಲ್ ನಲ್ಲಿ ಇದ್ದರು. ಹಾನಗಲನ ಯಾರ ಮನೆಯಲ್ಲಿ ಇದ್ದರು ಎಂದರೆ ನನಗೆ ಗೊತ್ತಿಲ್ಲ.

ಪ್ರತಿವಾದಿಯು ಎಷ್ಟು ವರ್ಷವಾಗಿದ್ದಾಗ ತವರಮೆಳ್ಳಿಹಳ್ಳಿ ಗ್ರಾಮಕ್ಕೆ ಕರೆದುಕೊಂಡು ಬಂದಿರುತ್ತಾರೆ ಎಂದರೆ 12 ವರ್ಷ ಇದ್ದಾಗಲೇ ಕರೆದುಕೊಂಡು ಬಂದಿರುತ್ತಾರೆ. ಸಾಮಾನ್ಯವಾಗಿ ಹಿಂದು ದರ್ಮದಲ್ಲಿ ಮಕ್ಕಳು ಇದ್ದಾಗ ದತ್ತು ತೆಗೆದುಕೊಳ್ಳಲು ಬರುವುದಿಲ್ಲ ಎಂದರೆ ಸರಿಯಲ್ಲ.

ಗಂಗಮ್ಮ ಯಾರ ಮನೆಯಲ್ಲಿ ಇದ್ದರು ಎಂದರೆ ಚನ್ನಬಸಪ್ಪರ ಮನೆಯಲ್ಲಿ ಇದ್ದಳು.

ಚನ್ನಬಸಪ್ಪ ಮತ್ತು ಗಂಗಮ್ಮ ಗಂಡ ಹೆಂಡತಿಯರು. ನಾಗವ್ವಳು ಸುಮಾರು ಎಷ್ಟು ವರ್ಷ ಇದ್ದರು ಎಂದರೆ ಸುಮಾರು 20-30 ವರ್ಷದ ತನಕ ಇದ್ದರು. ಆಗ ಗಂಗಮ್ಮ ಆರಾಮಾಗಿ ಇರಲಿಲ್ಲ ಎಂದರೆ ಆರಾಮಾಗಿ ಇದ್ದರು ಎಂದು ನುಡಿಯುತ್ತಾರೆ.

ದಾವಾ ಆಸ್ತಿಗಳನ್ನು ವಾದಿ ಮತ್ತು ಅವಳ ಗಂಡ ಸಾಗುವಳಿ ಮಾಡುತ್ತಿದ್ದರು ಎಂದರೆ ಸರಿಯಲ್ಲ. ಮುಂದುವರೆದು ಪ್ರತಿವಾದಿಯು ಸಾಗುವಳಿ ಮಾಡುತ್ತಿದ್ದರು ಎಂದು ನುಡಿಯುತ್ತಾರೆ.

ತವರಮೆಳ್ಳಿಹಳ್ಳಿ ಗ್ರಾಮದಲ್ಲಿರುವ ಆಸ್ತಿ ನಂ. 10 ಯಾರ ಮನೆ ಎಂದರೆ ಚನ್ನಬಸಪ್ಪ ರವರ ಮನೆ. ವಾದಿಯು ಸದರಿ ಮನೆಯಲ್ಲಿಯೇ ಬೆಳೆದಿದ್ದು ಈಗಲು ಸಹ ಅಲ್ಲಿಯೇ ಇದ್ದಾಳೆ ಎಂದರೆ ಸರಿಯಲ್ಲ. ಮುಂದು ವರೆದು ಅವಳ ಗಂಡನ ಮನೆಯಲ್ಲಿ ಇದ್ದಾಳೆ. ಈಗ ಸದರಿ ಮನೆಯು ಯಾರ ಹೆಸರಿನಲ್ಲಿ ಇದೆ ಎಂದರೆ ಪ್ರತಿವಾದಿಯ ಹೆಸರಿನಲ್ಲಿ ಇದೆ.

**ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದರಿಂದ ಮುಂದೂಡಲಾಯಿತು.**

( ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು.)

ಓ. ಹೆ. ಕೆ. ಸರಿ ಅದೆ.

ದಿವಾಣಿ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂಡಾಧಿಕಾರಿಗಳು.ಸವಣೂರು.